**E-ISSN:** 2583-9667
**Indexed Journal**
**Peer Reviewed Journal**
https://multiresearchjournal.theviews.in

**Received: 02-07-2024**
**Accepted: 07-09-2024**

**INTERNATIONAL JOURNAL OF ADVANCE RESEARCH IN MULTIDISCIPLINARY**

**Volume 2; Issue 4; 2024; Page No. 79-82**

# ಬಳ್ಳಾರಿಜಿಲ್ಲೆಯ ಕೃಷಿಯಲ್ಲಿ ಒಣಭೂಮಿ ಬೇಸಾಯದ ಪಾತ್ರ

**ಡಾ. ಬಸವರಾಜ ಯು**

ಸಂಶೋಧಕರು, ತಾಯಕನಹಳ್ಳಿ ಕೂಡ್ಲಿಗಿ (ತಾ) ವಿಜಯನಗರ, ಕರ್ನಾಟಕ, ಭಾರತ

**DOI:** https://doi.org/10.5281/zenodo.14344098

**Corresponding Author:** ಡಾ. ಬಸವರಾಜ ಯು

## Abstract

**ಬಳ್ಳಾರಿ ಜಿಲ್ಲೆ, ಕರ್ನಾಟಕದ ಪೂರ್ವ ಮೇರೆಯನ್ನು ಪಡೆದುಕೊಂಡು ಮಧ್ಯ ಭಾಗದಲ್ಲಿ ನೆಲೆಗೊಂಡಿದೆ. ೧೯೫೩ರಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳ ಸಹಯೋಗದಲ್ಲಿ ನಿರ್ಮಾಣವಾದ ತುಂಗಾಭದ್ರ ನದಿ ಜಿಲ್ಲೆಯ ನೈಸರ್ಗಿಕ ಮೇರೆಯಾಗಿದ್ದು. ಅದು ಪಶ್ಚಿಮದಲ್ಲಿ ಕೊಪ್ಪಳ ಜಿಲ್ಲೆಯನ್ನು ಹಾಗೂ ಉತ್ತರದಲ್ಲಿ ರಾಯಚೂರು ಜಿಲ್ಲೆಯನ್ನು ಪ್ರತ್ಯೇಕಿಸುತ್ತದೆ. ತುಂಗಾಭದ್ರ ನದಿಯ ಹೃದಯ ಭಾಗದಲ್ಲಿ ಸುಮಾರು ೫೦.ಕಿ.ಮೀ. ದೂರದವರಿಗೆ ಹರಡಿದೆ. ಬಳ್ಳಾರಿ ಜಿಲ್ಲೆಯ ಈ ನದಿಯ ಬಲದಂಡೆಯ ಮೇಲೆ ನೆಲೆಗೊಂಡಿದ್ದು. ಇದು ಜಿಲ್ಲೆಯ ಉತ್ತರದ ಮೇರೆಯನ್ನು ನಿಗಧಿಪಡಿಸುತ್ತದೆ. ಇಂತಹ ದಂಡೆಯ ಮೇಲೆ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ಪಟ್ಟಣವು ನೆಲೆಗೊಂಡಿದೆ. ಇಂತಹ ಐತಿಹಾಸಿಕ ಹಿನ್ನಲೆಯಿಂದಾಗಿ ಎಲ್ಲಾ ಋತುಮಾನಗಳಲ್ಲಿ ವಿಶ್ವದಾದ್ಯಂತ ಪ್ರವಾಸಿಗರನ್ನು ಆಕರ್ಷಿಸಿ ಪ್ರವಾಸೋದ್ಯಮ ತಾಣವಾಗಿ ಮಾರ್ಪಟ್ಟಿದೆ. ಜಿಲ್ಲೆಯ ಸಂಡೂರು ತಾಲ್ಲೂಕಿನ ಎತ್ತರವಾದ ಬೆಟ್ಟ ಗುಡ್ಡಗಳು ಸಮುದ್ರದ ಮಟ್ಟದಿಂದ ೨೪೦೦ ಅಡಿ ಎತ್ತರದಲ್ಲಿವೆ. ಬಳ್ಳಾರಿ ಜಿಲ್ಲೆ ಕರ್ನಾಟಕ ರಾಜ್ಯದ ಪೂರ್ವಭಾಗದ ಮಧ್ಯದಲ್ಲಿದ್ದು ದಕ್ಷಿಣೋತ್ತರವಾಗಿ ಹಬ್ಬಿಕೊಂಡಿದೆ. ಇದು ೧೪–೧೫ ಮತ್ತು ೧೫–೫೦ ಉತ್ತರ ಅಕ್ಷಾಂಶ ಹಾಗೂ ೭೫–೪೦ ಮತ್ತು ೭೭–೧೧ ಪೂರ್ವ ರೇಖಾಂಶಗಳ ಮಧ್ಯದಲ್ಲಿದೆ. ಈ ಜಿಲ್ಲೆಯ ಉತ್ತರವಾಗಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಹಾವೇರಿ ಜಿಲ್ಲೆ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಪೂರ್ವ ಭಾಗದಲ್ಲಿ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆ ಮತ್ತು ಅನಂತಪುರ ಜಿಲ್ಲೆಗಳಿಂದ ಸುತ್ತುವರೆದಿದ.**

**Keywords:** ಕೃಷಿ, ಒಣಭೂಮಿ ಬೇಸಾಯ, ನೀರಾವರಿ, ಭೂ ಬಳಕೆ, ಬಿತ್ತನೆಯ ಭೂ ಪ್ರದೇಶ

### ಪೀಠಿಕೆ

**ಬಳ್ಳಾರಿ ಜಿಲ್ಲೆಯ ಭೌಗೋಳಿಕತೆ:** ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶವು 1,91,791 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು. ರಾಜ್ಯ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನಮಾನವಿದೆ. ಜಿಲ್ಲೆಯನ್ನು ಆಡಳಿತಾತ್ಮಕವಾಗಿ 2 ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಬಳ್ಳಾರಿ ಇನ್ನೊಂದು ಹೊಸಪೇಟೆಯಾಗಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 8450 ಚ.ಕಿ.ಮೀ ಇದೆ ರಾಜ್ಯದ ವಿಸ್ತೀರ್ಣದಲ್ಲಿ ಶೇ 4.40 ರಷ್ಟು ಪಾಲನ್ನು ಹೊಂದಿದೆ. ವಿಸ್ತೀರ್ಣದಲ್ಲಿ ರಾಜ್ಯದಲ್ಲಿ 8ನೇ ಸ್ಥಾನದಲ್ಲಿದೆ (ಚಂದ್ರಶೇಖರ ಟಿ.ಆರ್., 1994.06). ಜಿಲ್ಲೆಯ ಉತ್ತರಕ್ಕೆ ಕೊಪ್ಪಳ, ದಕ್ಷಿಣಕ್ಕೆ ಚಿತ್ರದುರ್ಗ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆ, ಮತ್ತು ಪೂರ್ವಕ್ಕೆ ಆಂಧ್ರಪ್ರದೇಶ ರಾಜ್ಯವಿದೆ, ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲವಾಗಿದೆ, ಜಿಲ್ಲೆಯ ಹವಾಮಾನ ದೃಷ್ಟಿಯಿಂದ ಅತಿ ಉಷ್ಣವಲಯವಾಗಿದೆ. ಜಿಲ್ಲೆಯು ಅರಣ್ಯ ಪ್ರದೇಶ ಶೇಕಡ 12.47 ರಷ್ಟು ಹೊಂದಿದೆ. ಈ ಭಾಗದಲ್ಲಿ ತುಂಗಾಭದ್ರ ನದಿ ಇರುವುದರಿಂದ ಪೂರ್ವ ತಾಲೂಕುಗಳಿಗೆ ಪ್ರಮುಖ ನೀರಾವರಿ ಮೂಲವಾಗಿದೆ. ಈ ನದಿಯು ಜಿಲ್ಲೆಯಲ್ಲಿ 320 ಕಿ.ಮೀ. ನಷ್ಟು ದೂರ ಹರಿಯುತ್ತದೆ. ನೀರಾವರಿ ಕೃಷಿ ಅಭಿವೃದ್ಧಿಗೆ ಈ ನದಿಯು ಬೆನ್ನೆಲುಬು ಆಗಿದೆ. ಈ ನದಿಯನ್ನು ಬಿಟ್ಟರೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೆಲವು ಸಣ್ಣ ಪುಟ್ಟ ಜಲಾಶಯ ಕೆರೆ ಮತ್ತು ಕಟ್ಟೆಗಳಿವೆ.

ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ 9896 ಚ.ಕಿ.ಮೀ (2011 ಪ್ರಕಾರ) ಇರುವುದು ತಿಳಿದುಬರುತ್ತದೆ ನೈರುತ್ಯ ದಿಕ್ಕಿನ ಹಗರಿಬೊಮ್ಮನಹಳ್ಳಿ ತಾಲೂಕು ಕಲ್ಲಹಳ್ಳಿ ಎಂಬ ಗ್ರಾಮದಿಂದ ಈಶಾನ್ಯ ದಿಕ್ಕಿನ ಸಿರುಗುಪ್ಪ ತಾಲೂಕಿನ ಸಲ್ಲಕುದಲೂರು ಎಂಬ ಗ್ರಾಮದವರೆಗೆ 187 ಕಿ.ಮೀ ಉದ್ದವಾಗಿ ಪೂರ್ವ ಪಶ್ಚಿಮವಾಗಿ ಬಳ್ಳಾರಿ ತಾಲೂಕಿನ ಕಾರೇಕಲ್ಲು ವೀರಾಪುರದಿಂದ ಹಡಗಲಿ ತಾಲೂಕಿನ ಹೀರೆಬನ್ನಿ ಹಟ್ಟಿಯವರಿಗೆ 161 ಚ.ಕಿ.ಮೀ ಅಗಲವಾಗಿ ಹರಡಿಕೊಂಡಿದೆ. ಬಳ್ಳಾರಿ ಜಿಲ್ಲೆ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಬಹು ದೊಡ್ಡ ಜಿಲ್ಲೆಯಾಗಿತ್ತು (ಚಂದ್ರಶೇಖರ ಟಿ.ಆರ್ 1994.09).1953ಕ್ಕೆ ಮೊದಲು ಜಿಲ್ಲೆಯ 12 ತಾಲೂಕುಗಳನ್ನು ಹೊಂದಿದ್ದು. ಅವುಗಳಲ್ಲಿ ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಕೂಡ್ಲಿಗಿ, ಮಲ್ಲಾಪುರ ಮತ್ತು ಈಗಿನ ಆಂಧ್ರಪ್ರದೇಶದ ಆಲೂರು, ಆದೋನಿ, ರಾಯದುರ್ಗ ತಾಲೂಕುಗಳನ್ನು ಹೊಂದಿತ್ತು, 1955ರ ರಾಜ್ಯ ಪುನರ್ ವಿಂಗಡಣೆ ಸಂದರ್ಭದಲ್ಲಿ ಪ್ರಾಂತ್ಯವಾಗಿ ಪ್ರತ್ಯೇಕಗೊಂಡಾಗ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಅಲೂರು, ಆದೋನಿ, ಮತ್ತು ರಾಯದುರ್ಗ ತಾಲೂಕುಗಳು ಆಂಧ್ರಪ್ರದೇಶ ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕದಲ್ಲಿ 1997ರಲ್ಲಿ ಹೊಸ ಜಿಲ್ಲೆಗಳ ರಚನೆಯ ಸಂದರ್ಭದಲ್ಲಿ ಜಿಲ್ಲೆಗೆ ಸೇರಿದ್ದ ಮತ್ತೊಂದು ತಾಲೂಕು ಹರಪನಹಳ್ಳಿಯನ್ನು ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು. ಹಾಗಾಗಿ ಪ್ರಸ್ತುತ 2020–21ರ ಜಿಲ್ಲಾ ಅಂಕಿ ಅಂಶಗಳ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಕೊಟ್ಟೂರು, ಕೂಡ್ಲಿಗಿ, ಕುರುಗೋಡು, ಸಿರುಗುಪ್ಪ, ಸಂಡೂರು, 11 ತಾಲೂಕುಗಳನ್ನು ಹೊಂದಿದೆ.

ಮೇಲ್ಮೈ ಲಕ್ಷಣ; ಜಿಲ್ಲೆಯ ವಾಯುವ್ಯ ದಿಂದ ಆಗ್ನೇಯದವರಿಗೂ ಹಬ್ಬಿರುವ ಸಂಡೂರು ಬೆಟ್ಟಗಳು ಜಿಲ್ಲೆಯನ್ನು ಪೂರ್ವ ಪಶ್ಚಿಮವಾಗಿ ವಿಂಗಡಸಿವೆ. ಪೂರ್ವಭಾಗ ಬಳ್ಳಾರಿ ಮತ್ತು ಸಿರುಗುಪ್ಪ ತಾಲೂಕುಗಳನ್ನು ಒಳಗೊಂಡಿದ್ದರೆ.

ಪಶ್ಚಿಮ ಭಾಗ ಉಳಿದ ತಾಲೂಕುಗಳನ್ನು ತೆಗೆದುಕೊಂಡಿದೆ. ಪಶ್ಚಿಮದಲ್ಲಿ ಕಪ್ಪು ಮಣ್ಣಿನ ಬಯಲು ಪ್ರದೇಶ ಹೆಚ್ಚು. ಉಳಿದ ಕಡೆ ಮರಳು ಮಿಶ್ರಿತ ಮತ್ತು ಕೆಂಪು ಮಣ್ಣಿನ ಪ್ರದೇಶವಿದೆ. ಹಡಗಲಿಯನ್ನು ಬಿಟ್ಟು ಉಳಿದ ತಾಲೂಕುಗಳಲ್ಲಿ ಕಾಡು ಮತ್ತು ಬೆಟ್ಟಗುಡ್ಡಗಳು ಕಾಣಸಿಗುತ್ತವೆ. ಬೆಟ್ಟ ಸಾಲಿನ ನಡುವೆ ಒಂದು ಕಡೆ ಎರಡು ಕಮರಿಗಳಿವೆ (ನಾರಿ ಹಳ್ಳದ ಬಳಿ) ಈ ಶ್ರೇಣಿಯ ದಕ್ಷಿಣ ಭಾಗದಲ್ಲಿರುವ ಕುಮಾರಸ್ವಾಮಿ ದೇವಾಲಯವಿರುವ ಬೆಟ್ಟವು 1036 ಮೀ. ಎತ್ತರದಲ್ಲಿದೆ. ಮಧ್ಯದ ರಾಮನಮಲೈ ಬೆಟ್ಟ 992 ಮೀ. ಎತ್ತರದಲ್ಲಿದೆ. ತೀರಾ ಉತ್ತರದ ಕಡೆ ಮುಖ ಮಾಡಿ ನಿಂತಿರುವ ಜಂಬುನಾಥ ಶಿಖರದ ಎತ್ತರ ಸುಮಾರು 908 ಮೀ ಇಲ್ಲಿಯ ತಾಮ್ರ ಪರ್ವತ ಶ್ರೇಣಿ ದರೋಜಿ ಕೆರೆಯವರೆಗೆ ಬರೋಬ್ಬರಿ 428 ಕಿ.ಮೀ ವರೆಗೂ ವ್ಯಾಪಿಸಿದೆ. ಇದರಲ್ಲಿ ಅತ್ಯನ್ನತ ಶಿಖರದ ಎತ್ತರ ಸುಮಾರು 1003ಮೀ. ವ್ಯಾಪಿಸಿದೆ.

**ಬಳ್ಳಾರಿ ಜಿಲ್ಲೆಯ ಒಣಭೂಮಿ ಮತ್ತು ನೀರಾವರಿ ಹೊಂದಿರುವ ತಾಲೂಕುಗಳು**

ಜಿಲ್ಲೆಯ ಪ್ರಮುಖ ನೀರಾವರಿ ಮೂಲಗಳೆಂದರೆ ತುಂಗಾಭದ್ರ ನದಿ, ನಾರಿಹಳ್ಳಿ ಜಲಾಶಯ ಕೆರೆ ಮತ್ತು ಕೊಳವೆ ಭಾವಿಗಳಾಗಿವೆ. ಜಿಲ್ಲೆಯ ಕೆಲವೇ ತಾಲೂಕುಗಳು ತುಂಗಾಭದ್ರ ಕಾಲುವೆ ನೀರನ್ನು ಸಮೃದ್ಧವಾಗಿ ಪಡೆದುಕೊಂಡಿದ್ದರೆ, ಕೆಲವು ತಾಲೂಕುಗಳು ಈ ನೀರಿನಿಂದ ವಂಚಿತವಾಗಿದೆ. ಈ ನದಿಯ ನೀರಾವರಿ ಸಾಮರ್ಥ 12 ಲಕ್ಷ ಎಕರೆಗಳು ಇದ್ದು, ಇದರಲ್ಲಿ ಬಳ್ಳಾರಿ ಜಿಲ್ಲೆಯ 9.9ಲಕ್ಷ ಎಕರೆಯಾಗಿದೆ (ಶೇಷಾದ್ರಿ ಬಿ. 1998; 27). ಜಿಲ್ಲೆಯ ಪೂರ್ವ ತಾಲೂಕುಗಳಾದ ಬಳ್ಳಾರಿ ಹೊಸಪೇಟೆ ಮತ್ತು ಸಿರುಗುಪ್ಪ ಪ್ರದೇಶಗಳು ತುಂಗಾಭದ್ರ ನದಿ ನೀರಿನಿಂದ ಸಮೃದ್ಧವಾಗಿವೆ. ಕೂಡ್ಲಿಗಿ ಮತ್ತು ಹಡಗಲಿ ತಾಲೂಕುಗಳು ಯಾವ ನದಿ ನೀರನ್ನು ಅವಲಂಬಿಸದೆ ಮಳೆಯನ್ನೇ ಆಶ್ರಯಿಸಿ ಕೃಷಿಯನ್ನು ನೆಡುಸುತ್ತಿವೆ. ಸಂಡೂರು ಸ್ವಲ್ಪ ಪ್ರಮಾಣದ ಕಾಲುವೆ ನೀರನ್ನು ಹೊಂದಿದೆ ಒಟ್ಟು ಜಿಲ್ಲೆಯ 1,51,796 (30.40%) ಹೆಕ್ಟೇರ್‌ಗಳಷ್ಟು ನೀರಾವರಿ ಪ್ರದೇಶವನ್ನು ಹೊಂದಿದೆ. ಒಟ್ಟು ಇದರಲ್ಲಿ ಅತಿ ಹೆಚ್ಚು ನೀರಾವರಿ ಪ್ರದೇಶವನ್ನು ಹೊಸಪೇಟೆ ತಾಲೂಕು 23007 (58.61%) ಹೆಕ್ಟೇರುಗಳಷ್ಟು ಹೊಂದಿದೆ. ಅತಿ ಕಡಿಮೆ ನೀರಾವರಿ ಪ್ರದೇಶವನ್ನು ಕೂಡ್ಲಿಗಿ ತಾಲೂಕು 8501 ಹೆಕ್ಟರ್‌ಗಳು (9.85) ಹೊಂದಿದೆ (ಶೇಷಾದ್ರಿ .ಬಿ, 1998;28)

ತಾಲೂಕುವಾರು ನೀರಾವರಿ ಪ್ರದೇಶವನ್ನು ನೋಡಿದಾಗ ಪೂರ್ವ ತಾಲೂಕುಗಳಾದ ಹೊಸಪೇಟೆ ಸಿರುಗುಪ್ಪ ತಾಲೂಕುಗಳು ಸಮೃದ್ಧಿಯಾಗಿವೆ. ಪಶ್ಚಿಮ ತಾಲೂಕುಗಳು ಅಭಾವದ ತಾಲೂಕುಗಳಾಗಿವೆ. ಎರಡು ಭಾಗಗಳಲ್ಲಿ ಕೃಷಿ ಪ್ರಧಾನವಾಗಿ ಉದ್ಯೋಗವಾಗಿದ್ದರೂ ನೀರಾವರಿ ಕೃಷಿಯಿಂದ ಬರುವ ವರಮಾನ ಹೆಚ್ಚಾಗಿರುತ್ತದೆ. ಹಾಗಾಗಿ ಒಣಭೂಮಿಯ ಪ್ರದೇಶಗಳಿಂದ ಬರುವ ಆರ್ಥಿಕ ವರಮಾನ ಕಡಿಮೆಯಾಗಿರುತ್ತದೆ. ಅಧ್ಯಯನದ ದೃಷ್ಟಿಯಿಂದ ಜಿಲ್ಲೆಯಲ್ಲಿ ಹೆಚ್ಚು ಕಾಲುವೆ, ಕೆರೆ, ಬಾವಿ, ಕೊಳವೆಬಾವಿ ನೀರಾವರಿ ಪ್ರದೇಶವನ್ನು ಹೊಂದಿಲ್ಲದೆ ಇರುವಂತಹ ತಾಲೂಕುಗಳಾದ ಹಡಗಲಿ, ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ತಾಲೂಕಗಳನ್ನು ಹಾಗೂ ಅತಿಹೆಚ್ಚು ಒಣಭೂಮಿ ಪ್ರದೇಶವನ್ನು ಹೊಂದಿರುವ ತಾಲೂಕುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಕೋಷ್ಟಕ 1:** ಭೂ ಬಳಕೆ (ಹೆಕ್ಟೇರ್‌ಗಳಲ್ಲಿ) 2019–20

| ಕ್ರಮ ಸಂಖ್ಯೆ | ತಾಲ್ಲೂಕು | ಭೌಗೋಳಿಕ ವಿಸ್ತೀರ್ಣ | ಅರಣ್ಯ | ಒಟ್ಟು ಭೌಗೋಳಿಕ ವಿಸ್ತೀರ್ಣಕ್ಕೆ ಅರಣ್ಯ ಪ್ರದೇಶ | ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ | | | |
|---|---|---|---|---|---|---|---|---|
| | | | | | ವ್ಯವಸಾಯೇತರ | ಬಂಜರು | ಒಟ್ಟು | ಒಟ್ಟು ಭೌಗೋಳಿಕ ವಿಸ್ತೀರ್ಣಕ್ಕೆ ಸಾಗುವಳಿಗೆ ಲಭ್ಯವಿಲ್ಲದ ಭೂಮಿ |
| 1 | ಬಳ್ಳಾರಿ | 1,14,621 | 2612 | 2.28 | 16481 | 54446 | 21927 | 19.13 |
| 2 | ಹಡಗಲಿ | 94853 | 4738 | 05 | 12156 | 2766 | 14922 | 15.73 |
| 3 | ಹಗರಿಬೊಮ್ಮನಹಳ್ಳಿ | 89073 | 4482 | 5.03 | 20738 | 4397 | 25135 | 28.22 |
| 4 | ಹರಪನಹಳ್ಳಿ | 143024 | 22230 | 15.54 | 11339 | 4836 | 16175 | 11.31 |
| 5 | ಹೊಸಪೇಟೆ | 60995 | 22251 | 36.48 | 12621 | 7826 | 20447 | 35.52 |
| 6 | ಕಂಪ್ಲಿ | 39825 | 2719 | 6.83 | 3767 | 720 | 4487 | 11.27 |
| 7 | ಕೊಟ್ಟೂರು | 56335 | 8993 | 15.96 | 3228 | 3030 | 6258 | 11.11 |
| 8 | ಕೂಡ್ಲಿಗಿ | 11897 | 24668 | 22.05 | 12954 | 3629 | 16583 | 14.82 |
| 9 | ಕುರುಗೋಡು | 46960 | 265 | 056 | 4383 | 3037 | 7420 | 15.8 |
| 10 | ಸಿರುಗುಪ್ಪ | 104278 | 2171 | 2.08 | 10633 | 2664 | 13297 | 12.75 |
| 11 | ಸಂಡೂರು | 94359 | 24118 | 25.56 | 13330 | 17700 | 31030 | 32.89 |
| | ಒಟ್ಟು | 956220 | 119247 | 12.47 | 121630 | 56051 | 177681 | 18.58 |

ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿ: 2019–20

ಈ ಮೇಲಿನ ಕೋಷ್ಟಕವು ಬಳ್ಳಾರಿ ಜಿಲ್ಲೆಯ ಭೂ ಬಳಕೆಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ನಿರ್ದಿಷ್ಟವಾದ ಭೂ ಪ್ರದೇಶದಲ್ಲಿ ಜನವಸತಿಯ ಜೊತೆಗೆ ಭೂಮಿಯನ್ನು ವಿವಿಧ ಕಾರಣಗಳಿಗೆ ಭೂಮಿಯನ್ನು ಬಳಕೆ ಮಾಡಿಕೊಳ್ಳುತ್ತಾರೆ. ಈ ಭೂ ಬಳಕೆಯಲ್ಲಿ ಭೌಗೋಳಿಕ ವಿಸ್ತೀರ್ಣ, ಆರಣ್ಯ, ವ್ಯವಸಾಯೇತರ, ಬಂಜರು ಭೂಮಿ ಮತ್ತು ಸಾಗುವಳಿಗೆ ಲಭ್ಯವಿಲ್ಲದ ಭೂಮಿಯು ಶೇಕಡವಾರು ಭೂಮಿಯನ್ನು ವಿವರಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶವು 956220 ಹೊಂದಿದೆ. ಇದರಲ್ಲಿ ಅರಣ್ಯ ಪ್ರದೇಶವು 119247 ಹೆಕ್ಟೇರ್ ಪ್ರದೇಶವು ಅರಣ್ಯ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ಪ್ರದೇಶಕ್ಕೆ ಶೇಕಡವಾರು 12.47 ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ವ್ಯವಸಾಯೇತರ ಭೂಮಿ ಜಿಲ್ಲೆಯ ಒಟ್ಟು 121630 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಈ ಭೂಮಿಯು ವ್ಯವಸಾಯಕ್ಕೆ ಬಳಕೆ ಮಾಡದೆ ಇರುವಂತಹ ಭೂಮಿಯಾಗಿದೆ. ಈ ಪ್ರದೇಶವನ್ನು ವಿವಿಧ ಕಾರ್ಯಗಳಿಗೆ ಬಳಕೆ ಮಾಡಿಕೊಂಡಿದ್ದು, ವ್ಯವಸಾಯಕ್ಕೆ ಬಳಕೆ ಮಾಡಕೊಳ್ಳಾಲಾಗದ ಭೂಮಿಯಾಗಿದೆ. ಜಿಲ್ಲೆಯಲ್ಲಿ ಒಟ್ಟು ಬಂಜರು ಭೂಮಿಯು 56051 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಬಂಜರು ಭೂಮಿಯು ವ್ಯವಸಾಯ ಮಾಡಲಿಕ್ಕೆ ಯೋಗ್ಯವಾದ ಭೂಮಿಯಲ್ಲ. ಈ ಪ್ರದೇಶವು ಜೊಗು ಪ್ರದೇಶ, ಸವಳು ಪ್ರದೇಶ, ಮರಳು ಭೂಮಿಯಾಗಿರುತ್ತದೆ. ಅದ್ದರಿಂದ ಈ ಭೂಮಿಯು ಕೃಷಿಗೆ ಬಳಸಿಕೊಳ್ಳಲಾಗದ ಭೂಮಿಯಾಗಿದೆ. ವ್ಯವಸಾಯೇತರ ಭೂಮಿ ಮತ್ತು ಬಂಜರು ಭೂಮಿ ಸೇರಿ 177681 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾಗುವಳಿಗೆ ಲಭ್ಯವಿಲ್ಲದ ಭೂಮಿಯು 18.58 ಹೆಕ್ಟೇರ್ ಪ್ರದೇಶವು ಕಂಡುಬರುತ್ತದೆ.

ಭೌಗೋಳಿಕ ಪ್ರದೇಶದಲ್ಲಿ ವಿಸ್ತೀರ್ಣದಲ್ಲಿ ಹೆಚ್ಚು ವಿಸ್ತೀರ್ಣವನ್ನು ಹೊಂದಿರುವಂತ ಪ್ರದೇಶವೇಂದರೆ ಹರಪನಹಳ್ಳಿ ತಾಲೂಕು 143024 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ನಂತರದಲ್ಲಿ ಬಳ್ಳಾರಿ ತಾಲೂಕು 114621 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಈ ತಾಲೂಕು ನೀರಾವರಿ ಪ್ರದೇಶವಾಗಿದ್ದು, ಕೃಷಿ ಚಟುವಟಿಕೆಗೆ ಹೆಚ್ಚಿನ ಭೂಮಿಯನ್ನು ಬಳಸುತ್ತಾರೆ. ಕೂಡ್ಲಿಗಿ ತಾಲೂಕಿನಲ್ಲಿ 24668 ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ತಾಲೂಕು ಅಗಿದೆ. ಜಿಲ್ಲೆಯಲ್ಲಿ ಹೆಚ್ಚು ವ್ಯವಸಾಯೇತರ ಮತ್ತು ಬಂಜರು ಭೂಮಿಯನ್ನು ಹೊಂದಿರುವಂತಹ ತಾಲೂಕು ಎಂದರೆ ಸಂಡೂರು 31030 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ನಂತರದಲ್ಲಿ ಹಗರಿಬೊಮ್ಮನಹಳ್ಳಿ 25135 ಹೆಕ್ಟೇರ್ ಪ್ರದೇಶ ಹೊಂದಿದೆ. ಒಟ್ಟು ಭೌಗೋಳಿಕ ಪ್ರದೇಶಕ್ಕೆ ಸಾಗುವಳಿಗೆ ಲಭ್ಯವಿಲ್ಲದ ಭೂಮಿಯನ್ನು ಶೇಕಡ 32.89ರಷ್ಟು ಭೂಮಿಯನ್ನು ಸಂಡೂರು ತಾಲೂಕು ಹೊಂದಿದೆ ಕಂಪ್ಲಿ ತಾಲೂಕು ಅತಿ ಕಡಿಮೆ ಭೌಗೋಳಿಕ ಪ್ರದೇಶದ 11.31ರಷ್ಟು ಸಾಗುವಳಿಗೆ ಲಭ್ಯವಿಲ್ಲದ ಭೂಮಿಯನ್ನು ಹೊಂದಿರುತ್ತದೆ.

**ಕೋಷ್ಟಕ 2:** ಭೂ ಬಳಕೆ (ಹೆಕ್ಟೇರ್‌ಗಳಲ್ಲಿ) 2019–20

| ಕ್ರಸ | ತಾಲೂಕುಗಳು | ಸಾಗುವಳಿ ಮಾಡದಿರುವ ಇತರೆ ಭೂಮಿ | | | | |
|---|---|---|---|---|---|---|
| | | ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ಶಾಶ್ವತವಾದ ಹುಲ್ಲುಗಾವಲು ಪ್ರದೇಶ | ವೃಕ್ಷ ಮತ್ತು ತೋಪುಗಳು | ಒಟ್ಟು |
| 1 | ಬಳ್ಳಾರಿ | 788 | 124 | 0.11 | 158 | 1070 |
| 2 | ಹಡಗಲಿ | 1747 | 2216 | 2.34 | 00 | 3963 |
| 3 | ಹಗರಿಬೊಮ್ಮನಹಳ್ಳಿ | 2058 | 1108 | 1.24 | 123 | 3289 |
| 4 | ಹರಪನಹಳ್ಳಿ | 2561 | 1603 | 1.12 | 812 | 4976 |
| 5 | ಹೊಸಪೇಟೆ | 1253 | 188 | 0.31 | 78 | 1519 |
| 6 | ಕಂಪ್ಲಿ | 460 | 87 | 0.22 | 64 | 611 |
| 7 | ಕೊಟ್ಟೂರು | 1498 | 985 | 1.75 | 118 | 2601 |
| 8 | ಕೂಡ್ಲಿಗಿ | 5731 | 385 | 0.34 | 35 | 6152 |
| 9 | ಕುರುಗೋಡು | 485 | 30 | 0.06 | 53 | 568 |
| 10 | ಸಿರುಗುಪ್ಪ | 4177 | 103 | 0.1 | 241 | 4521 |
| 11 | ಸಂಡೂರು | 1659 | 45 | 0.05 | 01 | 1705 |
| | ಒಟ್ಟು | 22417 | 6857 | 0.72 | 1683 | 30975 |

**ಮೂಲ:** ವಾರ್ಷಿಕ ಋತು ಮತ್ತು ಬೆಳೆ ಅಂಕಿ ಅಂಶಗಳ ವರದಿಯ ಪ್ರಕಾರ: 2019–20

ಸಾಗುವಳಿ ಮಾಡದೆ ಇರುವ ಭೂಮಿಯನ್ನು ಕೆಲವು ಸಂದರ್ಭದಲ್ಲಿ ಸಾಗುವಳಿ ಭೂಮಿ ಮಾಡಿಕೊಂಡು ಅಥವಾ ಭೀಳು ಭೂಮಿಯಲ್ಲಿ ಸಾಗುವಳಿ ಮಾಡಿ ವ್ಯವಸಾಯಕ್ಕೆ ಬಳಸಿಕೊಳ್ಳಬಹುದು. ಇರುವ ಭೂಮಿಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ ಒಟ್ಟು 22417 ಹೆಕ್ಟೇರ್ ಪ್ರದೇಶವು ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯಾಗಿದೆ. ಈ ಭೂಮಿಯನ್ನು ಬಳಸಿಕೊಂಡು ವ್ಯಾವಾಸಾಯವನ್ನು ಮಾಡಬಹುದಾಗಿದೆ ಈ ಭೂಮಿಯನ್ನು ಬಳಸದೆ ಇರುವ ಭೂಮಿಯಾಗಿದೆ. ಕೂಡ್ಲಿಗಿಯು 5731 ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯನ್ನು ಹೊಂದಿದೆ. ಇದು ಪ್ರದೇಶವು ಬಳಕೆ ಮಾಡದೆ ಇರುವ ಭೂಮಿಯಾಗಿದೆ. ಅದೇ ರೀತಿಯಾಗಿ ಕಂಪ್ಲಿಯು ಕೇವಲ 460 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಭೂಮಿಯನ್ನು ಹೊಂದದೆ ಇರುವಂತಹ ಗೇಣಿಯ ಭೂಮಿಯನ್ನು ವ್ಯವಸಾಯವನ್ನು ಮಾಡುವಂತಹ ಕೃಷಿಕರು, ಈ ಕೃಷಿ ಭೂಮಿಯನ್ನು ಬಳಕೆ ಮಾಡಿಕೊಂಡು ಕೃಷಿಯನ್ನು ಮಾಡಬೇಕಾಗುತ್ತದೆ. ಹಡಗಲಿಯು 1747 ಹೆಕ್ಟೇರ್ ಪ್ರದೇಶವನ್ನು ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯನ್ನು ಹೊಂದಿದೆ ಹಗರಿಬೊಮ್ಮನಹಳ್ಳಿಯಲ್ಲಿ 2058 ಹೆಕ್ಟೇರ್ ಭೂಮಿಯನ್ನು ಹೊಂದಿದೆ.

ಖಾಯಂ ಗೋಮಾಳ ಪ್ರದೇಶವು ಸಾಗುವಳಿ ಮಾಡದಿರುವ ಭೂಮಿಯಾಗಿದ್ದು ಕೃಷಿ ಕಾರ್ಯಗಳಿಗೆ ಬಳಕೆ ಯೋಗ್ಯವಾದ ಭೂಮಿಯಾಗಿದ್ದರು ಕೂಡ ಇಲ್ಲಿ ವ್ಯವಸಾಯ ಮಾಡುವುದಿಲ್ಲ. ಇದು ಸರ್ಕಾರಿ ಜಾಗವು ಅಗಿರುತ್ತದೆ. ಇಲ್ಲಿ ಜನ ಸಾಮಾನ್ಯರಿಗೆ ಅನುಕೂಲಕರವಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲುಬಹುದು. ಜಿಲ್ಲೆಯಲ್ಲಿ ಒಟ್ಟು ಖಾಯಂ ಗೋಮಾಳವು 6875 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಇದರಲ್ಲಿ ಹೆಚ್ಚಿನ ಖಾಯಂ ಗೋಮಾಳವನ್ನು ಹೊಂದಿರುವ ತಾಲೂಕು ಎಂದರೆ ಹಡಗಲಿಯಾಗಿದ್ದು 2216 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಈ ಗೋಮಾಳವನ್ನು ಜನಸಮಾನ್ಯರು ಬಳಕೆ ಮಾಡಿಕೊಳ್ಳಬಹುದು. ಅದೇ ರೀತಿಯಾಗಿ ಕಡಿಮೆ ಗೋಮಾಳವನ್ನು ಹೊಂದಿರುವ ತಾಲೂಕು ಕುರುಗೋಡು 30 ಹೆಕೇರ್ ಪ್ರದೇಶವು ಖಾಯಂ ಗೋಮಾಳವಾಗಿದೆ. ಹಗರಿಬೊಮ್ಮನಹಳ್ಳಿಯಲ್ಲಿ ಒಟ್ಟು ಖಾಯಂ ಗೋಮಾಳವು 1108 ಹೆಕ್ಟೇರ್ ಪ್ರದೇಶವಾಗಿದ್ದು, ಕೂಡ್ಲಿಗಿಯು 356 ಹೆಕ್ಟೇರ್ ಪ್ರದೇಶವು ಖಾಯಂ ಗೋಮಾಳವನ್ನು ಹೊಂದಿದೆ. ಇತರೆ ಸಾಗುವಳಿ ಮಾಡದೆ ಇರುವ ಭೂಮಿಯು ಒಟ್ಟು 0.72 ರಷ್ಟು ಭೂಮಿಯನ್ನು ಹೊಂದಿದೆ

ವೃಕ್ಷ ಮತ್ತು ತೋಪುಗಳು ಒಟ್ಟು 30975 ರಷ್ಟು ಭೂಮಿಯನ್ನು ಅಕ್ರಮಿಸಿಕೊಂಡಿದ್ದು ಅದರಲ್ಲಿ ಹೆಚ್ಚು ಹಗರಿಬೊಮ್ಮನಹಳ್ಳಿಯಾದ್ದಾಗಿದ್ದು ಒಟ್ಟು 123 ಹೆಕ್ಟರ್ ಪ್ರದೇಶವು ವೃಕ್ಷ ಮತ್ತು ತೋಪುಗಳನ್ನು ಹೊಂದಿದೆ. ಕಡಿಮೆ ಪ್ರದೇಶವಾಗಿದೆ. ಕೂಡ್ಲಿಗಿ ತಾಲೂಕು 35 ಹೆಕ್ಟೇರ್ ಪ್ರದೇಶವನ್ನು ಮಾತ್ರ ಹೊಂದಿದೆ. ವೃಕ್ಷ ಮತ್ತು ತೋಪುಗಳನ್ನ ಹೊಂದೆದೆ ಇರುವಂತಹ ತಾಲೂಕು ಎಂದರೆ ಅದು ಹಡಗಲಿಯಾಗಿದ್ದು, ಇಲ್ಲಿ ಯಾವುದೇ ರೀತಿಯಾದ ವೃಕ್ಷ ಮತ್ತು ತೋಪುಗಳನ್ನು ಹೊಂದಿರುವುದಿಲ್ಲ.

**ಕೋಷ್ಟಕ 3:** ಭೂ ಬಳಕೆ (ಹೆಕ್ಟೇರ್‌ಗಳಲ್ಲಿ) 2019–20 ಬೀಳು ಭೂಮಿ ಮತ್ತು ಬಿತ್ತನೆಯಾದ ಪ್ರದೇಶ

| ಕ್ರಮ ಸಂಖ್ಯೆ | ತಾಲೂಕು | ಬೀಳುಭೂಮಿ | | | ಬಿತ್ತನೆಯಾದ ಪ್ರದೇಶ | | | |
|---|---|---|---|---|---|---|---|---|
| | | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು | ಭೌಗೋಳಿಕ ವಿಸ್ತೀರ್ಣಕ್ಕೆ ಬಿತ್ತನೆಯಾದ ಪ್ರದೇಶ |
| 1 | ಬಳ್ಳಾರಿ | 13540 | 4263 | 17803 | 71209 | 6029 | 77238 | 62.13 |
| 2 | ಹಡಗಲಿ | 00 | 1222 | 1222 | 7008 | 20615 | 90623 | 73.81 |
| 3 | ಹಗರಿಬೊಮ್ಮನಹಳ್ಳಿ | 00 | 698 | 698 | 55469 | 9715 | 65184 | 62.27 |
| 4 | ಹರಪನಹಳ್ಳಿ | 1346 | 255 | 1601 | 98042 | 16816 | 114858 | 68.55 |
| 5 | ಹೊಸಪೇಟೆ | 424 | 539 | 963 | 15815 | 4110 | 19925 | 25.93 |
| 6 | ಕಂಪ್ಲಿ | 7781 | 397 | 8178 | 23830 | 9121 | 32951 | 59.84 |
| 7 | ಕೊಟ್ಟೂರು | 720 | 26 | 746 | 37737 | 3616 | 41353 | 66.99 |
| 8 | ಕೂಡ್ಲಿಗಿ | 00 | 00 | 00 | 64494 | 2994 | 67488 | 57.64 |
| 9 | ಕುರುಗೋಡು | 809 | 2169 | 2978 | 35729 | 6833 | 42562 | 76.08 |
| 10 | ಸಿರುಗುಪ್ಪ | 2530 | 5827 | 8357 | 75932 | 8407 | 84339 | 72.82 |
| 11 | ಸಂಡೂರು | 1379 | 4167 | 5546 | 31960 | 2855 | 34815 | 33.87 |
| 12 | ಒಟ್ಟು | 28529 | 19563 | 48092 | 580225 | 9111 | 671336 | 60.68 |

ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿಯ ಪ್ರಕಾರ: 2019–20

ಈ ಮೇಲಿನ ಕೋಷ್ಟಕದಲ್ಲಿ ಬೀಳು ಭೂಮಿ ಮತ್ತು ಬಿತ್ತನೆಯಾದ ಭೂಮಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ವ್ಯವಸಾಯದ ಭೂಮಿಯನ್ನು ಕೆಲವು ಕಾರಣಗಳಿಂದ ಬಿತ್ತನೆ ಮಾಡದೆ ಬೀಳು ಬಿಡುವುದು ಉಂಟು ಈ ಬೀಳು ಭೂಮಿಯಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಸಹ ಭೂಮಿಯನ್ನು ಉಳುಮೆ ಮಾಡದೆ ಬಿಡುತ್ತಾರೆ. ಈ ಕೋಷ್ಟಕದಲ್ಲಿ ಒಟ್ಟು ಬೀಳು ಭೂಮಿ 48,092 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಹೆಚ್ಚು ಬೀಳು ಭೂಮಿಯನ್ನು ಬಳ್ಳಾರಿ ತಾಲೂಕು 17,803 ಹೆಕ್ಟರ್ ಪ್ರದೇಶವನ್ನು ಹೊಂದಿದ್ದರೆ ಕೂಡ್ಲಿಗಿ ತಾಲೂಕಿನಲ್ಲಿ ಬೀಳುಭೂಮಿಯನ್ನು ಹೊಂದದೆ ಇರುವುದು ಕಂಡುಬರುತ್ತದೆ. ಅಂದರೆ ಕೂಡ್ಲಿಗಿ ತಾಲೂಕಿನಲ್ಲಿ ಸಂಪೂರ್ಣವಾಗಿ ಭೂಮಿಯನ್ನು ಬಳಕೆ ಮಾಡುತ್ತಿರುವುದು ಗಮನಾರ್ಹವಾಗಿದೆ. ಜಿಲ್ಲೆಯಲ್ಲಿ ಬಿತ್ತನೆಯಾದ ಪ್ರದೇಶವನ್ನು

ವಿಶ್ಲೇಷಿಸಿದರೆ ಬಿತ್ತನೆ ಪ್ರದೇಶದಲ್ಲಿ ಶೇಕಡ 60ರಷ್ಟು ಭೂಮಿಯು ಬಿತ್ತನೆಗೆ ಒಳಪಡುವ ಪ್ರದೇಶವಾಗಿದೆ. ಹರಪನಹಳ್ಳಿ ತಾಲೂಕು ನಿವ್ವಳ ಬಿತ್ತನೆಯ ಪ್ರದೇಶವನ್ನು 98,042 ಹೆಕೇರ್ ಪ್ರದೇಶವನ್ನು ಹೊಂದಿದೆ. ಹಾಗೆಯೇ ಹೊಸಪೇಟೆ ತಾಲೂಕು ನಿವ್ವಳ ಬಿತ್ತನೆಯ ಪ್ರದೇಶವನ್ನು 15,815ಹೆಕ್ಟರ್ ಪ್ರದೇಶವನ್ನು ಹೊಂದಿದೆ. ಒಟ್ಟು ಭೌಗೋಳಿಕ ಪ್ರದೇಶಕ್ಕೆ ನಿವ್ವಳ ಬಿತ್ತನೆ ಪ್ರದೇಶವು ಶೇಕಡ 25.93 ರಷ್ಟು ಮಾತ್ರ ಹೊಂದಿದೆ. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಗೆ ಒಳಪಡುವಂತಹ ಭೂಮಿಯನ್ನು ಹಡಗಲಿ ತಾಲೂಕು 20615 ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಅಂದರೆ ಈ ತಾಲೂಕಿನಲ್ಲಿ ಭೂಮಿಯನ್ನು ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡುತ್ತಾರೆ ಎಂಬುವುದನ್ನು ತಿಳಿಯಬಹುದಾಗಿದೆ. ಕೂಡ್ಲಿಗಿ ತಾಲೂಕಿನಲ್ಲಿ 2,994 ಹೆಕ್ಟೇರ್ ಪ್ರದೇಶವು ಮಾತ್ರ ಒಂದಕ್ಕಿಂತ ಹೆಚ್ಚು ಬಾರಿ ಉಳುಮೆಗೆ ಒಳಪಡುವ ಭೂಮಿಯಾಗಿದೆ. ಒಟ್ಟು ಬಿತ್ತನೆಯ ಪ್ರದೇಶದಲ್ಲಿ ಶೇಕಡ 73.81 ರಷ್ಟು ಭೂಮಿ ಬಿತ್ತನೆ ಮಾಡುವ ತಾಲೂಕು ಹಡಗಲಿಯಾಗಿದೆ. ಸಂಡೂರು ತಾಲೂಕು ಭೌಗೋಳಿಕ ವಿಸ್ತಿರ್ಣಕ್ಕೆ ಶೇಕಡ 33.87 ರಷ್ಟು ಭೂಮಿಯನ್ನು ಮಾತ್ರ ಬಿತ್ತನೆಗೆ ಒಳಪಡುವಂತಹ ಭೂಮಿಯಾಗಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಬೀಳು ಭೋಮಿಗಿಂತಲೂ ಬಿತ್ತನೆಯ ಪ್ರದೇಶವು ಅಧಿಕ ಪ್ರಮಾಣದಲ್ಲಿರುವುದು ಕಾಣುತ್ತೇವೆ.

**ಉಪಸಂಹಾರ**

ಒಣಭೂಮಿ ಕೃಷಿಯು ಮೂಲತವಾಗಿ ಪುರಾತನ ಕಾಲದಿಂದಲೂ ನಡೆದುಬಂದ ಕೃಷಿಯಾಗಿದೆ. ಅದರು ಸಹ ಇದರ ಪ್ರಮಾಖ್ಯತೆಯು ಕೊಂಚ ಸಹ ಕಡಿಮೆಯಾಗಿಲ್ಲ ಕಾರಣ ಕೃಷಿಗೆ ಯೋಗ್ಯವಾಗಿರುವ ಎಲ್ಲಾ ಭೂಮಿಯು ನೀರಾರಿ ಕೃಷಿಗೆ ಹೊಳಪಟ್ಟಿಲ್ಲ ಎಲ್ಲಾ ಪ್ರದೇಶವು ನೀರಾವರಿ ಅವರಿಸಿ ಕೊಂಡಿದ್ದರೆ ಒಣ ಭೂಮಿ ಕಡಿಮೆಯಾಗಿರುತ್ತಿತ್ತು. ನೀರಿನ ಸಂಪನ್ಮೂಲಗಳಾದ ತುಂಗಭದ್ರ ಅಧಿಕ ಪ್ರಮಾಣದಲ್ಲಿ ಇದ್ದರು ಸಹ ಶೇಕಡ 32 ರಷ್ಟು ಮಾತ್ರವೇ ನೀರಾವರಿಗೆ ಒಳಪಟ್ಟಿರುವ ಪ್ರದೇಶವಾಗಿದ್ದು. ಒಣ ಭೂಮಿ ಬೇಸಾಯವು ಅತಿ ಮುಖ್ಯವಾಗಿರುವುದು ಕಂಡುಬರುತ್ತದೆ.

**ಉಲ್ಲೇಖಗಳು**

1. ಬಳ್ಳಾರಿ ಜಿಲ್ಲಾ ಗೆಜೆಟೆರಿಯರ್
2. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳು ನೋಟ 2020–21
3. ಬಳ್ಳಾರಿ ಜಿಲ್ಲಾ ಅಂಕಿ ಅಂಶಗಳು ನೋಟ 2016–17
4. ಕರ್ನಾಟಕದ ಅಂಕಿ ಅಂಶಗಳು ನೋಟ 2020–21
5. ಮಾನವ ಅಭಿವೃದ್ಧಿ ಸೂಚ್ಯಂಕ 2015

**Creative Commons (CC) License**
This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.